# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

ಸಂ/ಕರಾಸಾ/ಮಂಡ್ಯವಿ/ಸಂ/ವಾ/314/2021–22 ದಿನಾಂಕ:–12/08/2021

ಇ–ಟೆಂಡರ್ ಪ್ರಕಟಣೆ ಸಂ:04/2021–22

ವಿಷಯ: ಸಸ್ಯಾಹಾರ ಊಟೋಪಚಾರ ಒದಗಿಸುವ ಬಗ್ಗೆ.

| ಸಂಸ್ಥೆಯು ನಿಗಧಿ ಪಡಿಸಿರುವ ಆಹಾರ ಪದಾರ್ಥಗಳ ವಿವರ | ಆಹಾರ ತಯಾರಿಸಿ ಒದಗಿಸಬೇಕಾಗಿರುವ ಸಮಯ | ಸಂಸ್ಥೆಯು ನಿಗದಿ ಪಡಿಸಿರುವ ದರ | ಷರಾ |
|---|---|---|---|
| 1 | 2 | 3 | 4 |
| ನಮೂದಿಸಿದ ಮೆನುವಿನಂತೆ ವಿವಿಧ ಬಗೆಯ ಬೆಳಗಿನ ತಿಂಡಿ ಮತ್ತು ವಡೆ/ಬಜ್ಜಿ ಮತ್ತು ಟೀ/ ಕಾಫಿ. | ಬೆಳಗ್ಗೆ 08:00 ರಿಂದ 09.00. | ಬಿಡ್ ಮಾಡಿರುವ ಮೊತ್ತದಲ್ಲಿ ಶೇ.60ರ ಅನುಪಾತದಂತೆ ಬಿಲ್ ಪಾವತಿಗೆ ಪರಿಗಣಿಸಲಾಗುವುದು. | |
| ಕಾಫಿ/ಟೀ/ಬಾದಾಮಿ ಹಾಲು– ಜೊತೆ 02 ಬಿಸ್ಕೆಟ್(ಉತ್ತಮ ಗುಣಮಟ್ಟದ್ದು) | ಬೆಳಗ್ಗೆ 11:30 ಮತ್ತು ಮದ್ಯಾಹ್ನ 03:30. | | |
| ಚಪಾತಿ–02/ಸಾಗು/ ಅಥವಾ ರಾಗಿಮುದ್ದೆ–1 ಅಥವಾ 2, ಅನ್ನ,ಸಾಂಬಾರು– ರಸಂ, ಪಲ್ಯ, ಮಜ್ಜಿಗೆ/ಮೊಸರು–ಹಪ್ಪಳ/ವಡೆ–ಉಪ್ಪಿನಕಾಯಿ (ನಮೂದಿಸಿದ ಮೆನುವಿನಂತೆ ಸಾಂಬಾರು,ಪಲ್ಯ ಮತ್ತು ವಾರದಲ್ಲಿ 1 ದಿನ ಮತ್ತು ವಿಶೇಷ ದಿನಗಳಲ್ಲಿ ಸ್ವೀಟ್) | ಮಧ್ಯಾಹ್ನ 1:30 ರಿಂದ 2:30. | | |
| ಚಪಾತಿ–02/ಸಾಗು/ಅಥವಾ ರಾಗಿ ಮುದ್ದೆ–1 ಅಥವಾ 2, ಅನ್ನ–ಸಾಂಬಾರು –ರಸಂ–ಪಲ್ಯ,ಮಜ್ಜಿಗೆ/ಮೊಸರು–ಹಪ್ಪಳ/ ವಡೆ–ಉಪ್ಪಿನಕಾಯಿ (ನಮೂದಿಸಿದ ಮೆನುವಿನಂತೆ ಸಾಂಬಾರು, ಪಲ್ಯ) | ರಾತ್ರಿ 08:00 ರಿಂದ 09:00. | ಬಿಡ್ ಮಾಡಿರುವ ಮೊತ್ತದಲ್ಲಿ ಶೇ.40ರ ಅನುಪಾತದಂತೆ ಬಿಲ್ ಪಾವತಿಗೆ ಪರಿಗಣಿಸಲಾಗುವುದು. | |
| ಒಟ್ಟು | | ರೂ.150.00 (ನಿಗಧಿತ ಗರಿಷ್ಠ ಅಂತಿಮ ದರ ಜಿಎಸ್‌ಟಿ ಸೇರಿ) | |

ಮೇಲಿನಂತೆ ಸಂಸ್ಥೆಯು ತಿಳಿಸಿರುವ/ತಿಳಿಸುವ ರೀತಿ ಶುಚಿಯಾದ, ರುಚಿಯಾದ ಸಸ್ಯಾಹಾರ ತಿಂಡಿ ಮತ್ತು ಊಟವನ್ನು ಪೂರ್ಣ ಪ್ರಮಾಣದಲ್ಲಿ (Full Meals) ಸರಬರಾಜು ಮಾಡಲು ಯಾವುದೇ ಲೋಪ ದೋಷಗಳಿಗೆ ಆಸ್ಪದ ನೀಡದಂತೆ, ಟೆಂಡರ್ ನಿಬಂದಗಳನ್ವಯ ಸರಬರಾಜು ಮಾಡುವುದು.

| ಕ್ರ. ಸಂ. | ವಿವರ | ದಿನಾಂಕ | ಸಮಯ |
|---|---|---|---|
| 1 | ಇ–ಪೋರ್ಟಲ್‌ನಲ್ಲಿ ಅರ್ಜಿ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ | 31.08.2021 | 17.00 |

| | | | |
|---|---|---|---|
| 2 | ಅರ್ಜಿದಾರರು ಇ-ಟೆಂಡರ್ ಅರ್ಜಿ ಶುಲ್ಕ, ಇಎಂಡಿ ಶುಲ್ಕದ ಮೂಲ ಡಿ.ಡಿ. ಹಾಗೂ ಇತರೆ ಅಗತ್ಯ ದಾಖಲಾತಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಮಂಡ್ಯ ವಿಭಾಗೀಯ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ. | ದಿ:01-09-2021ರ ಸಮಯ 10.30 ರಿಂದ ದಿ:02-09-2021 ರ ಸಮಯ 17.00ರವರೆಗೆ | |
| 3 | ಇ-ಟೆಂಡರ್‌ನ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | 03.09.2021 | 11.30 |
| 4 | ಇ-ಟೆಂಡರ್‌ನ ಆರ್ಥಿಕ(ಫೈನಾಷ್ಶಿಯಲ್) ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | 07.09.2021 | 11.30 |

ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ "http://www.eproc.karnataka.gov.in" ನಿಂದ ಅಥವಾ ನಿಗಮದ ವೆಬ್ ಸೈಟ್ "http://ksrtc.karnataka.gov.in"ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ ಮಂಡ್ಯ ವಿಭಾಗ, ಮಂಡ್ಯ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ-7760990652, 7760990661, 7337680837.

ಸಹಿ/-
ವಿಭಾಗೀಯ ನಿಯಂತ್ರಣಾಧಿರಿ
ಕ.ರಾ.ರ.ಸಾ.ನಿಗಮ,ಮಂಡ್ಯ ವಿಭಾಗ, ಮಂಡ್ಯ

ಗೌರವ ಪೂರ್ವಕವಾಗಿ ಪ್ರತಿಯನ್ನು:-

1. ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.
2. ಪ್ರಾಂಶುಪಾಲು, ಚಾಲಕ ಮತ್ತು ತಾಂತ್ರಿಕ ತರಬೇತಿ ಕೇಂದ್ರ, ಮಳವಳ್ಳಿ. ಕ.ರಾ.ರ.ಸಾ.ನಿ., ಮಂಡ್ಯ ವಿಭಾಗ.

ಪ್ರತಿಯನ್ನು:-

1. ಘಟಕ ವ್ಯವಸ್ಥಾಪಕರು ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ.ಆರ್.ಪೇಟೆ ಹಾಗೂ ಪಾಂಡವಪುರ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ, ಹಾಗೂ ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಸಂಧಾನ/ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.
2. ವಿಭಾಗೀಯ ಸಂಚಲನಾಧಿಕಾರಿ/ಸಹಾಯಕ ಕಾನೂನು ಅಧಿಕಾರಿ/ಸಹಾಯಕ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ವಿಭಾಗರವರುಗಳು ಸಂಧಾನ/ಟೆಂಡರ್ ತೆರೆಯುವ ಸಮಯದಲ್ಲಿ ಹಾಜರಿರಲು ಸೂಚಿಸಲಾಗಿದೆ ಹಾಗೂ ಸ.ಕಾ.ನಿ.ಅ.ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಸಂಧಾನ/ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.
3. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿ, ವಾ.ಕ.ರ.ಸಾ.ನಿ, ಈ.ಕ.ರ.ಸಾ.ನಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

# ಚಾಲಕ ಮತ್ತು ತಾಂತ್ರಿಕ ತರಬೇತಿ ಕೇಂದ್ರ, ಮಳವಳ್ಳಿ ಇಲ್ಲಿನ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗುವ ಸಿಬ್ಬಂದಿ/ಅಭ್ಯರ್ಥಿಗಳಿಗೆ ಊಟೋಪಚಾರ ಪೂರೈಕೆಗಾಗಿ ಕರೆಯಲಾದ ಇ-ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳು

01. ಬಿಡ್‌ದಾರರು ಇ-ಟೆಂಡರ್‌ಗೆ ಅರ್ಜಿಗಳನ್ನು ಹಾಗೂ ದಾಖಲಾತಿಗಳನ್ನು ಆನ್‌ಲೈನ್ ಮುಖಾಂತರವೇ ಸಲ್ಲಿಸುವುದು

02. ಇ.ಎಂ.ಡಿ. ಒಟ್ಟು ಮೊತ್ತ ರೂ.1,00,000/-ಗಳಲ್ಲಿ ರೂ.500/-ಗಳನ್ನು ಇ-ಪೋರ್ಟಲ್ ಮುಖೇನ ಪಾವತಿಸುವುದು. ಇನ್ನುಳಿದ ಇ.ಎಂ.ಡಿ. ರೂ.99,500/- ಮೊತ್ತವನ್ನು ಮತ್ತು ಟೆಂಡರ್ ಅರ್ಜಿ ಶುಲ್ಕ ರೂ.3000/- ಹಾಗೂ ಜಿ.ಎಸ್.ಟಿ ರೂ.540/- (ಶೇ.18) ಒಟ್ಟು ರೂ.3540/- ಗಳನ್ನು ಪ್ರತ್ಯೇಕವಾಗಿ "Divisional Controller, K.S.R.T.C., Mandya Division, Mandya" ಇವರ ಹೆಸರಿಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದು ಸದರಿ ಅರ್ಜಿ ಶುಲ್ಕದ ಡಿ.ಡಿ. ಮತ್ತು ಇಎಂಡಿ ಮೊತ್ತದ ಮೂಲ ಡಿ.ಡಿ.ಗಳನ್ನು ಹಾಗೂ ಇ-ಪೋರ್ಟಲ್‌ನಲ್ಲಿ ಸಲ್ಲಿಸಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಮುಚ್ಚಿದ ಲಕೋಟೆಯಲ್ಲಿ ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದೊಳಗೆ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು. ಸದರಿ ದಾಖಲಾತಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದ ಮುಂಚಿತಾವಾಗಿ ಮತ್ತು ಸದರಿ ದಿನಾಂಕ ಮತ್ತು ಸಮಯ ಮುಕ್ತಾಯದ ನಂತರ ಸ್ವೀಕರಿಸಲಾಗುವುದಿಲ್ಲ. ನಿಗಧಿತ ದಿನಾಂಕ ಮತ್ತು ಸಮಯದೊಳಗೆ ಮೂಲ ಅರ್ಜಿ ಡಿ.ಡಿ, ಇಎಂಡಿ ಡಿ.ಡಿ ಮತ್ತು ಇ-ಪೋರ್ಟಲ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ/ಅರ್ಜಿ ಸಲ್ಲಿಸುವ ಅರ್ಜಿದಾರರು ಚಾಲ್ತಿಯಲ್ಲಿರುವ ತಮ್ಮ ಮೊಬೈಲ್/ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು. ಸದರಿ ಅರ್ಜಿ ಶುಲ್ಕದ ಡಿ.ಡಿ. ಮತ್ತು ಇಎಂಡಿ ಮೊತ್ತದ ಡಿ.ಡಿ.ಗಳನ್ನು ಇ-ಪೋರ್ಟಲ್‌ನಲ್ಲೂ ಅಪ್‌ಲೋಡ್ ಮಾಡುವುದು.

03. ಬಿಡ್‌ದಾರರು ಅರ್ಜಿ ಶುಲ್ಕದ ಮೊತ್ತದಲ್ಲಿ ಭಾಗಶಃ ಅಥವಾ ಅಪೂರ್ಣ ಮಾಹಿತಿಯ ಡಿ.ಡಿ.ಗಳನ್ನು ಸಲ್ಲಿಸುವಂತಿಲ್ಲ ಮತ್ತು ನಿಗಧಿತ ಇಎಂಡಿ ಮೊತ್ತದಲ್ಲಿ ರೂ.500/- ಹೊರತುಪಡಿಸಿ ಉಳಿಕೆ ಇಎಂಡಿಯ ಪೂರ್ಣ ಮೊತ್ತದ ಬದಲಿಗೆ ಭಾಗಶಃ ಅಥವಾ ಅಪೂರ್ಣ ಮಾಹಿತಿಯ ಡಿ.ಡಿ.ಗಳನ್ನು ಸಲ್ಲಿಸುವಂತಿಲ್ಲ. ಅಂತಹ ಅರ್ಜಿ/ಬಿಡ್‌ನ್ನು ತಿರಸ್ಕರಿಸಲಾಗುವುದು. ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

04. ಇ-ಟೆಂಡರ್‌ನಲ್ಲಿ ಎರಡು ಹಂತವನ್ನು ಹೊಂದಿದ್ದು ಅವು ಟೆಕ್ನಿಕಲ್ ಬಿಡ್ ಮತ್ತು ಆರ್ಥಿಕ ಬಿಡ್ ಆಗಿರುತ್ತದೆ. ಅಗತ್ಯ ಎಲ್ಲಾ ದಾಖಲೆಗಳನ್ನು ಸಲ್ಲಿಸಿ ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹ ಹೊಂದಿರುವವರು ಮಾತ್ರ ಆರ್ಥಿಕ ಬಿಡ್‌ಗೆ ಅರ್ಹರಾಗಿರುತ್ತಾರೆ. ಅಗತ್ಯ ದಾಖಲಾತಿಗಳನ್ನು ಸಲ್ಲಿಸದ ಬಿಡ್‌ದಾರರು ಆರ್ಥಿಕ ಬಿಡ್‌ಗೆ ಅರ್ಹರಲ್ಲ.

05. ಟೆಂಡರ್ ಅವಧಿಯನ್ನು ಎರಡು ವರ್ಷಕ್ಕೆ ಸೀಮಿತಗೊಳಿಸಿದೆ.

06. ಆಯ್ಕೆಯಾದ ಬಿಡ್‌ದಾರರ ಇಎಂಡಿ ಮೊತ್ತ ರೂ.1,00,000/-ಗಳನ್ನು ಭದ್ರತಾ ಠೇವಣಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

07. ಇ.ಎಂ.ಡಿ./ಭದ್ರತಾ ಠೇವಣಿಯ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

08. ಇ-ಟೆಂಡರ್‌ನಲ್ಲಿ ನಿಗದಿತ ಒಟ್ಟು ಶುಲ್ಕಕ್ಕಿಂತ ಕಡಿಮೆ ಮೊತ್ತವನ್ನು ಎಲ್1 ಮತ್ತು ಎಲ್2 ಬಿಡ್‌ದಾರರು ನಮೂದಿಸಿದ ಸಂದರ್ಭದಲ್ಲಿ, ಎಲ್1 ಬಿಡ್‌ದಾರರು ಭದ್ರತಾ ಠೇವಣಿಯನ್ನು ಪಾವತಿಸಿ ಕರಾರು ಒಪ್ಪಂದ

ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡ ನಂತರ ಎಲ್2 ಬಿಡ್‌ದಾರರು ಎಲ್1 ಬಿಡ್‌ಗೆ ಮ್ಯಾಚ್ ಮಾಡಿದಲ್ಲಿ ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ. ಎಲ್2 ಬಿಡ್‌ದಾರರು ಭದ್ರತಾ ಠೇವಣಿಯನ್ನು ಪಾವತಿಸಿ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ/ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡು ನಂತರ ಎಲ್1 ಬಿಡ್‌ಗೆ ಮ್ಯಾಚ್ ಮಾಡಿದಲ್ಲಿ ಎಲ್3 ಬಿಡ್‌ದಾರರನ್ನು ಸಹ ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ.

09. ಟೆಂಡರ್‌ನಲ್ಲಿ ಆಯ್ಕೆಯಾಗದ ಬಿಡ್‌ದಾರರುಗಳ (ಎಲ್1,ಎಲ್2 & ಎಲ್3 ಹೊರತುಪಡಿಸಿ) ಇ.ಎಂ.ಡಿ. ಮೊತ್ತವನ್ನು ಟೆಂಡರ್ ಅಂತಿಮಗೊಂಡ ನಂತರ ಹಿಂದಿರುಗಿಸಲಾಗುವುದು. ಎಲ್1ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಎಲ್1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು. ಎಲ್3 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಎಲ್1 or ಎಲ್2 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.

10.ಇ-ಪೋರ್ಟಲ್‌ನಲ್ಲಿ ನಮೂದಿಸಿರುವ ಬಿಡ್ ಮೊತ್ತವನ್ನು ಮಾತ್ರ ಪರಿಗಣಿಸಲಾಗುವುದು. ಯಾವುದೇ ಬಿಡ್‌ಮಾಡಿರುವ ನಮೂನೆಗಳನ್ನು ಪರಿಗಣಿಸಲಾಗುವುದಿಲ್ಲ.

11.ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿಯನ್ನು ಪಾವತಿಸಿ, ರೂ.1000/- ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

12.ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿಯನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ ಹಾಗೂ ನಿಗದಿತ ದಿನಾಂಕದಲ್ಲಿ ವ್ಯವಹಾರ ಪ್ರಾರಂಬಿಸದೆ ಇದ್ದಲ್ಲಿ ಅಂತಹ ಬಿಡ್‌ದಾರರ ಭದ್ರತಾ ಠೇವಣಿ/ಇಎಂಡಿ ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

13. ಹೋಟೆಲ್/ಮೆಸ್/ಕ್ಯಾಂಟೀನ್/ಕ್ಯಾಟರಿಂಗ್ ಉದ್ಯೋಗ/ಉದ್ದಿಮೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರುವ ಲೈಸನ್ಸ್ ಪ್ರತಿ ಹೊಂದಿರಬೇಕು. ಸದರಿ ಪ್ರತಿಯನ್ನು ಇ-ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡುವುದು. ಮೂಲ ಪ್ರತಿಯನ್ನು ಟೆಕ್ನಿಕಲ್ ಬಿಡ್ ತೆರೆಯುವ ದಿನದಂದು ಪರಿಶೀಲನೆಗೆ ಹಾಜರು ಪಡಿಸುವುದು.

14 ಸರಕು ಮತ್ತು ಸೇವಾ ತೆರಿಗೆ ನೋಂದಾವಣಿಯ ಪ್ರತಿಯನ್ನು ಇ-ಪೋರ್ಟ್‌ಲ್ ನಲ್ಲಿ ಅಪ್ ಲೋಡ್ ಮಾಡುವುದು. ಮೂಲ ಪ್ರತಿಯನ್ನು ಟೆಕ್ನಿಕಲ್ ಬಿಡ್ ತೆರೆಯುವ ದಿನದಂದು ಪರಿಶೀಲನೆಗೆ ಹಾಜರು ಪಡಿಸುವುದು.

15. ಕ.ರಾ.ರ.ಸಾ.ನಿಗಮ/ಈ.ಕ.ರ.ಸಾ.ನಿಗಮ/ವಾ.ಕ.ರ.ಸಾ.ನಿಗಮ/ಬೆಂ.ಮ..ಸಾ.ನಿಗಮ ಸಂಸ್ಥೆ ಅಥವಾ ಸರ್ಕಾರ/ಸರ್ಕಾರದ ಅಧೀನಕ್ಕೆ ಒಳಪಟ್ಟ ಸಂಸ್ಥೆ ಅಥವಾ ಪ್ರತಿಷ್ಠಿತ ಖಾಸಗೀ ಸಂಸ್ಥೆಯ ಯಾವುದಾದರೂ ಒಂದರಲ್ಲಿ ಅಥವಾ ಅವು ನಡೆಸುವ ಯಾವುದಾದರೂ ಒಂದು ತರಬೇತಿ ಕೇಂದ್ರದಲ್ಲಿ ಮೆಸ್/ ಕ್ಯಾಂಟೀನ್/ಕ್ಯಾಟರಿಂಗ್ ನಡೆಸಿರುವ ಸಂಬಂಧ 2016 ರಿಂದ 2021ರ ಅವಧಿಯಲ್ಲಿ ಒಟ್ಟು ಕನಿಷ್ಠ 2 (ಎರಡು) ವರ್ಷಗಳ ಅವಧಿಗೆ ಶುಚಿ ರುಚಿಯಾದ ಸಸ್ಯಾಹಾರ ಊಟ ತಯಾರಿಸಿ ಸರಬರಾಜು

ಮಾಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆ/ ಸಂಸ್ಥೆ / ನಿಗಮದಿಂದ ಪಡೆದಿರುವ ದೃಡೀಕೃತ ಅನುಭವ ಪ್ರಮಾಣ ಪತ್ರವನ್ನು ಇ-ಪೋರ್ಟ್‌ಲ್‌ನಲ್ಲಿ ಅಪ್ ಲೋಡ್ ಮಾಡುವುದು. ಮೂಲ ಪ್ರತಿಯನ್ನು ಟೆಕ್ನಿಕಲ್ ಬಿಡ್ ತೆರೆಯುವ ದಿನದಂದು ಪರಿಶೀಲನೆಗೆ ಹಾಜರು ಪಡಿಸುವುದು.

16. ಬಿಡ್‌ದಾರರು ವಿಳಾಸ ದೃಢೀಕರಣ ಪತ್ರಗಳಾದ (Voter ID, Aadhaar Card, Bank Passbook, Passport, etc.) ಯಾವುದಾದರೊಂದನ್ನು ಇ-ಪೋರ್ಟ್‌ಲ್ ನಲ್ಲಿ ಅಪ್ ಲೋಡ್ ಮಾಡುವುದು. ಮೂಲ ಪ್ರತಿಯನ್ನು ಟೆಕ್ನಿಕಲ್ ಬಿಡ್ ತೆರೆಯುವ ದಿನದಂದು ಪರಿಶೀಲನೆಗೆ ಹಾಜರು ಪಡಿಸುವುದು.

17. ಬಿಡ್‌ದಾರರು ಪಾನ್‌ಕಾರ್ಡ್ ಪ್ರತಿಯನ್ನು ಇ-ಪೋರ್ಟ್‌ಲ್ ನಲ್ಲಿ ಅಪ್ ಲೋಡ್ ಮಾಡುವುದು. ಮೂಲ ಪ್ರತಿಯನ್ನು ಟೆಕ್ನಿಕಲ್ ಬಿಡ್ ತೆರೆಯುವ ದಿನದಂದು ಪರಿಶೀಲನೆಗೆ ಹಾಜರು ಪಡಿಸುವುದು.

18. ಬಿಡ್‌ದಾರರು ಷರತ್ತು ಮತ್ತು ನಿಬಂಧನೆಗಳನ್ನು ಓದಿ ಸಹಿ ಮಾಡಿ ಅಪ್‌ಲೋಡ್ ಮಾಡುವುದು. ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ-ದೃಡೀಕರಣ ಪತ್ರ ಸಲ್ಲಿಸುವುದು.(ಅನುಭಂದ-1 (Annexure-1)ನ್ನು ಭರ್ತಿಗೊಳಿಸಿ ಅಪಲೋಡ್ ಮಾಡುವುದು.)ಮೂಲ ಪ್ರತಿಯನ್ನು ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವುದು.

19. ಆಯ್ಕೆಯಾದ ಗುತ್ತಿಗೆದಾರರು ಪ್ರತಿದಿನ ಹಾಜರಾಗುವ ಶಿಬಿರಾರ್ಥಿಗಳಿಗೆ ತೃಪ್ತಿದಾಯಕವಾಗಿ, ಶುಚಿಯಾಗಿ ಹಾಗೂ ರುಚಿಯಾಗಿ ಅರ್ಜಿ ನಮೂನೆ -2 ರಲ್ಲಿರುವಂತೆ ಬೆಳಗ್ಗೆ ಪೂರ್ಣ ಪ್ರಮಾಣದ ತಿಂಡಿ ಮತ್ತು ಕಾಫಿ/ಟೀ 11.30 & 15.30. ಕ್ಕೆ ಕಾಫಿ/ಟೀ, ಬಿಸ್ಕೆಟ್ , ಮಧ್ಯಾಹ್ನ ಮತ್ತು ರಾತ್ರಿ ಪೂರ್ಣ ಪ್ರಮಾಣದ (ಫುಲ್ ಮೀಲ್ಸ್) ಸಸ್ಯಾಹಾರ ಊಟವನ್ನು ಕಛೇರಿಯ ಮೆನುವಿನಂತೆ ಪ್ರತಿದಿನ ತರಬೇತಿ ಕೇಂದ್ರದಲ್ಲಿಯೇ ಆಯಾಯ ಸಮಯದಲ್ಲೇ ತಯಾರಿಸಿ ನೀಡಬೇಕಾಗಿರುತ್ತದೆ. ತರಬೇತಿ ಕೇಂದ್ರದಲ್ಲಿ ಪೂರೈಕೆ ಮಾಡಬೇಕಾದ ತಿಂಡಿ, ಊಟ, ಕಾಫಿ/ಟೀ ಬಿಸ್ಕೆಟ್ ನೀಡಬೇಕಾಗಿರುವ ಸಂಖ್ಯಾಬಲ ಅಂದರೆ ಸೋಮವಾರದಿಂದ ಶನಿವಾರದ ವರೆಗೆ ತರಬೇತಿಗೆ ಹಾಜರಾಗುವ ನೌಕರರುಗಳು ಮತ್ತು ಸರ್ಕಾರಿ ಯೋಜನೆಯಡಿ ನಿಯೋಜನೆಗೊಳ್ಳುವ ಅಭ್ಯರ್ಥಿಗಳ ಸಂಖ್ಯೆಯನ್ನು ಅವಲಂಬಿಸಿದ್ದು ಅಂದಾಜು ಪ್ರತಿ ದಿನಕ್ಕೆ ಗರಿಷ್ಟ 250 ಸಂಖ್ಯೆಗೆ ಒದಗಿಸಬೇಕಾಗಿರುತ್ತದೆ. ದೈನಂದಿನ ಸಂಖ್ಯೆಯು ಬದಲಾವಣೆಗೆ ಒಳಪಟ್ಟಿರುತ್ತದೆ.

20. ಆಯ್ಕೆ ಬಿಡ್‌ದಾರರು ಅಡಿಗೆ ತಯಾರಿಯನ್ನು ತರಬೇತಿ ಕೇಂದ್ರದಲ್ಲಿರುವ ಅಡಿಗೆ ಕೋಣೆಯಲ್ಲೇ ಮಾಡಬೇಕು. ಊಟ, ತಿಂಡಿ, ಕಾಫಿ/ಟೀ ತಯಾರು ಹಾಗೂ ಸರಬರಾಜು ಮಾಡುವ ಎಲ್ಲಾ ಸಲಕರಣೆಗಳು ಅಂದರೆ ಪಾತ್ರೆ, ತಟ್ಟೆ, ಲೋಟ,ಚಮಚ, ಮತ್ತು ಅಡುಗೆಯವರು ಇತ್ಯಾದಿಗಳನ್ನು ಗುತ್ತಿಗೆದಾರರೇ ಒದಗಿಸಬೇಕಾಗಿರುತ್ತದೆ.ತಿಂಡಿ, ಊಟವನ್ನು ತಯಾರಿಸಬೇಕಾದಲ್ಲಿ ತರಬೇತಿ ಕೇಂದ್ರದ ಆವರಣದಲ್ಲಿ ಅಡುಗೆ ಕೊಠಡಿ, ಪದಾರ್ಥಗಳ ಶೇಖರಣೆಗೆ ಇರುವ ಉಗ್ರಾಣ ಕೊಠಡಿ ಮತ್ತು ಊಟ ಬಡಿಸಲು ಸ್ಥಳಾವಕಾಶವಿರುತ್ತದೆ. ಈ ಸ್ಥಳದಲ್ಲಿಯೇ ಊಟ ತಯಾರಿಸಿ ಬಡಿಸುವ ವ್ಯವಸ್ಥೆ ಮಾಡಬೇಕು ಮತ್ತು ಹೊರಗಿನಿಂದ ತಯಾರಿಸಿದ ಆಹಾರವನ್ನು ವಿತರಿಸಲು ಅವಕಾಶವಿರುವುದಿಲ್ಲ.

21. ಅಡುಗೆ ಕೋಣೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳನ್ನು ಗುತ್ತಿಗೆದಾರರೇ ಸ್ವಂತ ಖರ್ಚಿನಲ್ಲಿ ಸ್ಥಳೀಯ ಸಂಸ್ಥೆ/ಇಲಾಖೆಯು ಸೂಚಿಸಿರುವ ಸ್ಥಳಕ್ಕೆ ವಿಲೇವಾರಿ ಮಾಡುವುದು.

22. ನೀರು & ಕರೆಂಟ್ (ಮಿಕ್ಸಿ/ಗ್ರೈಂಡರ್ ಉಪಯೋಗಿಸಲು) ಸೌಲಭ್ಯವನ್ನು ಮಾತ್ರ ಮಾಡಿಕೊಡಲಾಗುವುದು. ಇದರ ಮಾಸಿಕ ಶುಲ್ಕ ರೂ.4000/– (ನಾಲ್ಕು ಸಾವಿರ) ಪ್ರತಿ ತಿಂಗಳು ಪಾವತಿಸಬೇಕಾಗಿರುತ್ತದೆ.

23. ಗ್ಯಾಸ್/ ಸ್ಟೀಮ್‌ನಿಂದ ಮಾತ್ರ ಆಹಾರವನ್ನು ತಯಾರಿಸಬೇಕು. ಹೊಟ್ಟು/ಸೌದೆ/ಕಟ್ಟಿಗೆಗಳನ್ನು ಬಳಸುವಂತಿಲ್ಲ ಹಾಗೂ ಗೃಹೋಪಯೋಗಿ ಗ್ಯಾಸ್ ಸಿಲಿಂಡರ್‌ಗಳನ್ನು ಬಳಸುವಂತಿಲ್ಲ ಮತ್ತು ಪ್ಲಾಸ್ಟಿಕ್ ಬಳಕೆಯನ್ನು ಪೂರ್ಣ ಪ್ರಮಾಣದಲ್ಲಿ ನಿಷೇದಿಸಲಾಗಿದೆ.

24 ತರಬೇತಿ ಕೇಂದ್ರದಲ್ಲಿ ಅಡುಗೆ ಕೆಲಸದ ಮೇಲೆ ನಿಯೋಜನೆಗೊಳ್ಳುವ ಸಿಬ್ಬಂದಿ ಶುಭ್ರವಾದ ಸಮವಸ್ತ್ರ ಧರಿಸಿರಬೇಕು,ತಲೆ ಮತ್ತು ಕೈಗಳಿಗೆ ಗ್ಲೌಸ್ ಗಳನ್ನು ಧರಿಸಬೇಕು. ಇವರ ಆರೋಗ್ಯ ಹಾಗೂ ಸುರಕ್ಷತೆಯು ಲೈಸನ್ಸದಾರರ ಜವಾಬ್ದಾರಿ ಯಾಗಿರುತ್ತದೆ. ಅಡಿಗೆ ಹಾಗೂ ಸ್ವಚ್ಛತೆಯ ಕೆಲಸಕ್ಕೆ ಬಾಲ ಕಾರ್ಮಿಕರ ಬಳಕೆಯನ್ನು ಮಾಡುವಂತಿಲ್ಲ. ಕೆಲಸಕ್ಕೆ ನೇಮಿಸಿಕೊಂಡಿರುವವರ ವಿವರ(ಆಧಾರ್/ಚುನಾವಣಾ ಗುರುತಿನ ಚೀಟಿ ಅಥವಾ ಇತ್ಯಾದಿ)ಗಳನ್ನು ಕಛೇರಿಗೆ ನೀಡುಬೇಕಾಇರುತ್ತದೆ.

25. ಊಟೋಪಚಾರ ವ್ಯವಸ್ಥೆಯ ಮೇಲ್ವಿಚಾರಣೆಗೆ ಒಬ್ಬ ಜವಾಬ್ದಾರಿಯುತ (Quality ,quantity checking supervisor) ಸಿಬ್ಬಂದಿಯನ್ನು ಸ್ಥಳದಲ್ಲಿ ಲಭ್ಯರಿರುವಂತೆ ನಿಯೋಜಿಸುವುದು .ಪ್ರತಿದಿನ ತಯಾರಿಸಿದ ತಿಂಡಿ, ಊಟವನ್ನು  ಬಡಿಸುವ ಅರ್ಧ ಗಂಟೆ ಮುಂಚೆ ಹಾಜರಿರುವ ತರಬೇತಿ ಕೇಂದ್ರದ ಪ್ರಾಂಶುಪಾಲರು/ ಸಿಬ್ಬಂದಿಗಳ/ಕರಾಸಾ ಪೇದೆರವರ ಪರಿಶೀಲನೆಗೆ ತಂದು ಪರೀಕ್ಷಿಸಿದ ನಂತರ ಬಡಿಸುವುದು.

26. ಆಯ್ಕೆಯಾದ ಸರಬರಾಜು ಗುತ್ತಿಗೆದಾರರು ಊಟದ ಬಿಲ್ಲಿನ ಬಾಬ್ತನ್ನು ತಯಾರಿಸಿ ಸರಬರಾಜು ಮಾಡಿದ ತಿಂಗಳ ಮುಂದಿನ ಮಾಹೆಯ 5ನೇ ತಾರೀಖಿನೊಳಗೆ ಕಚೇರಿಗೆ ಸಲ್ಲಿಸಿದ ನಂತರ ಸೂಕ್ತ ಪಥದ ಮೂಲಕ ಆಡಿಟ್ ಮಾಡಿದ ನಂತರ ಸರಬರಾಜು ಮಾಡಿದ ಆಹಾರ ಪದಾರ್ಥಗಳ ಬಿಲ್ ಮೊತ್ತವನ್ನು ತಿಂಗಳಿಗೊಮ್ಮೆ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಮಂಡ್ಯ ವಿಭಾಗ ರವರ ಮೂಲಕ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

27. ಯಾವುದೇ ಮುನ್ಸೂಚನೆ ಅಥವಾ ಕಾರಣ ನೀಡದೆ ಟೆಂಡರ್‌ಅನ್ನು ಸ್ವೀಕರಿಸುವ/ ತಿರಸ್ಕರಿಸುವ ಮಾರ್ಪಾಡು/ರದ್ದು ಮಾಡುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿದೆ.

28. ಬಿಡ್ ಮಾಡಿದಾಗ ಒಟ್ಟು ಕಡಿಮೆ ಮೊತ್ತವನ್ನು (ಜಿಎಸ್‌ಟಿ ಸೇರಿ ಬಿಡ್ ಮೊತ್ತ ನಮೂದಿಸುವುದು) ನಮೂದಿಸಿರುತ್ತಾರೋ ಅಂತಹ ಬಿಡ್‌ದಾರರನ್ನು ಆಯ್ಕೆ ಮಾಡಲಾಗುವುದು.

29. ಆಯ್ಕೆ ಬಿಡ್‌ದಾರರು ಆಹಾರದ ಗುಣಮಟ್ಟ/ಶುಚಿತ್ವ/ರುಚಿಕರ/ಆಹಾರದ ಪ್ರಮಾಣದಲ್ಲಿ ನಿಗಧಿಯಂತೆ ನೀಡದಿದ್ದರೆ/ಒದಗಿಸದಿದ್ದರೆ ಆಯ್ಕೆಯನ್ನು ರದ್ದುಪಡಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

30. ಆಯ್ಕೆ ಬಿಡ್‌ದಾರರು ಆಹಾರದ ಗುಣಮಟ್ಟ/ಶುಚಿತ್ವ/ರುಚಿಕರ/ಆಹಾರದ ಪ್ರಮಾಣದಲ್ಲಿ ನಿಗಧಿಯಂತೆ ನೀಡದಿದ್ದರೆ/ಒದಗಿಸದಿದ್ದರೆ ಅಂತಹ ಪರವಾನಗಿದಾರರಿಗೆ ನಿಗಮವು ಮೊದಲ ಹಾಗೂ ಎರಡನೇ ಪ್ರಕರಣಕ್ಕೆ ನೋಟಿಸ್ ನೀಡಲಾಗುವುದು, 3ನೇ ಪ್ರಕರಣಕ್ಕೆ ರೂ.500/–, 4ನೇ ಪ್ರಕರಣಕ್ಕೆ ರೂ.1,000/– ಮತ್ತು 5ನೇ ಪ್ರಕರಣಕ್ಕೆ ರೂ.2,000/– ದಂಡ ವಿಧಿಸಲಾಗುವುದು. ಇದು 5 ಬಾರಿ ನಂತರ ಪುನರಾವರ್ತನೆಗೊಂಡಲ್ಲಿ, ಪ್ರತಿ ಪ್ರಕರಣಕ್ಕೆ ರೂ.2,000/–ರಂತೆ ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಥವಾ ಪಾವತಿಸಬೇಕಾದ ಬಾಕಿ ಬಿಲ್‌ಗಳಲ್ಲಿ ಕಡಿತಗೊಳಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

31. ಆಯ್ಕೆಯಾದ ಸರಬರಾಜುದಾರರು ತಟ್ಟೆ,ಲೋಟ ಹಾಗೂ ಇನ್ನಿತರೆ ಪಾತ್ರೆಗಳನ್ನು ತೊಳೆಯಲು ಮತ್ತು ಅಡುಗೆ ಕೊಠಡಿ, ಊಟದ ಹಾಲ್‌ನ ಸ್ವಚ್ಚತೆಗಾಗಿ ಪ್ರತ್ಯೇಕವಾಗಿ ಸಿಬ್ಬಂದಿಗಳನ್ನು ನೇಮಿಸಿಕೊಂಡು ಕೊಠಡಿಗಳನ್ನು ಶುಚಿಯಾಗಿಟ್ಟುಕೊಳ್ಳುವುದು ಮತ್ತು ತೊಳೆದ ಶುಚಿಯಾದ ತಟ್ಟೆ/ಲೋಟಗಳನ್ನು ಬಿಸಿ ನೀರಿನಲ್ಲಿ ಮುಳುಗಿಸಿಟ್ಟು ನಂತರ ಅಭ್ಯರ್ಥಿಗಳಿಗೆ ಊಟ ಮಾಡಲು ನೀಡುವುದು.

32. ತರಬೇತಿ ಕೇಂದ್ರದ ಆಯಾದಿನದ ಮೆನುವಿನಂತೆ ಅಡುಗೆಯನ್ನು ತಯಾರಿಸುವುದು.

33. ಸಿಬ್ಬಂದಿ/ಅಭ್ಯರ್ಥಿಗಳಿಗೆ ಕುಡಿಯಲು ಬಿಸಿ ನೀರಿನ ವ್ಯವಸ್ಥೆ ಮಾಡುವುದು ಕಡ್ಡಾಯವಾಗಿರುತ್ತದೆ.

34. ನೀರನ್ನು ಲಭ್ಯತೆಗನುಗುಣವಾಗಿ ಒದಗಿಸಲಾಗುವುದು, ನೀರಿನ ಸಮಸ್ಯೆ ಉದ್ಭವಿಸಿದಲ್ಲಿ ಗುತ್ತಿಗೆದಾರರು ಅವರ ವೆಚ್ಚದಲ್ಲಿಯೇ ಹೊರಗಿನಿಂದ ತರಿಸಿಕೊಳ್ಳುವುದು.

35. ಅಡುಗೆ ಕೆಲಸದ ಮೇಲೆ ನಿಯೋಜನೆಗೊಳ್ಳುವ ವ್ಯಕ್ತಿಗಳಿಗೆ ಅಪಘಾತ ಹಾಗೂ ಇನ್ನಾವುದೇ ಅಸ್ವಾಭಾವಿಕ ನಷ್ಟ ಉಂಟಾದಲ್ಲಿ ಇದಕ್ಕೆ ಸಂಬಂದಿಸಿದ ಪರಿಹಾರ ಹಾಗೂ ಇತರೆ ವೆಚ್ಚಗಳಿಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.ಮತ್ತು ಚಾಲಕ ಮತ್ತು ತಾಂತ್ರಿಕ ತರಬೇತಿ ಕೇಂದ್ರಕ್ಕೆ ಸಂಬಂಧವಿರುವುದಿಲ್ಲ.

36. ಅಡುಗೆ ಕೊಠಡಿಯಲ್ಲಿ ಗುತ್ತಿಗೆದಾರರಿಗೆ ಸೇರಿದ ಸಾಮಾನು/ಸಾಮಾಗ್ರಿಗಳು,ಅಡುಗೆ ಪರಿಕರ ಇತ್ಯಾದಿ ವಸ್ತುಗಳ ಜವಾಬ್ದಾರಿ ಗುತ್ತಿಗೆದಾರರದಾಗಿದ್ದು,ಯಾವುದೇ ವಸ್ತಗಳು ಕಳ್ಳತನ/ಹಾಳಾದರೆ ಸಂಸ್ಥೆಯ ಜವಾಬ್ದಾರಿ ಏನೂ ಇರುವುದಿಲ್ಲ.

37. ಒಟ್ಟಾರೆ ಊಟದ ಬಿಲ್ಲಿನಲ್ಲಿ ಆದಾಯ ತೆರಿಗೆ, ಜಿ.ಎಸ್.ಟಿ. ಹಾಗೂ ಟಿ.ಡಿ.ಎಸ್.ನ್ನು ಸರ್ಕಾರದ ನಿಯಮಾಳಿಯಂತೆ ಕಡಿತಗೊಳಿಸಲಾಗುವುದು. ಕಾಲ ಕಾಲಕ್ಕೆ ಸರ್ಕಾರ ವಿಧಿಸುವ ಷರುತ್ತುಗಳಿಗೆ ಬದ್ದರಿರುವುದು.

38. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು.

39. ಗುತ್ತಿಗೆದಾರರು ಸಂಸ್ಥೆಗೆ ಯಾವುದೇ ಷರತ್ತು ಗಳನ್ನು ಹಾಕುವಂತಿಲ್ಲ ಮತ್ತು ಸಂಸ್ಥೆಯು ಕಾಲಕಾಲಕ್ಕೆ ವಿಧಿಸುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ದವಾಗಬೇಕಾಗಿರುತ್ತದೆ.

40. ಆಹಾರವನ್ನು ಬದಲಾವಣೆ ಮಾಡುವ ಬಗ್ಗೆ ತಿಳಿಸಿದರೆ ಅಂತಹ ಆಹಾರವನ್ನು ಕಡ್ಡಾಯವಾಗಿ ನೀಡಲು ಸಹಕರಿಸಬೇಕು ಹಾಗೂ ಆಗಿಂದಾಗ್ಗೆ ನೀಡುವ ಆದೇಶಗಳನ್ನು ಪಾಲಿಸಬೇಕಾಗಿರುತ್ತದೆ.

41.ಆಯ್ಕೆಯಾದ ಬಿಡ್‌ದಾರರು ಕನಿಷ್ಠ 01 ವರ್ಷ ಕಾಲ ನಡೆಸಬೇಕು.

42. ಆಯ್ಕೆಯಾದ ಬಿಡ್‌ದಾರರು 01 ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 03 ತಿಂಗಳ ಮುಂಗಡ ಮನವಿಯನ್ನು ನಿಗಮಕ್ಕೆ ಸಲ್ಲಿಸಬೇಕು.

43. ಆಯ್ಕೆಯಾದ ಬಿಡ್‌ದಾರರು 01 ವರ್ಷದೊಳಗೆ ಕರಾರನ್ನು ರದ್ದುಪಡಿಸಿಕೊಂಡಲ್ಲಿ ಮತ್ತು 01 ವರ್ಷದ ನಂತರ 03 ತಿಂಗಳ ಮುಂಗಡ ಮನವಿಯನ್ನು ನಿಗಮಕ್ಕೆ ಸಲ್ಲಿಸದೆ ಏಕಾಏಕಿ ಕರಾರನ್ನು ರದ್ದುಪಡಿಸಿಕೊಂಡಲ್ಲಿ ನಿಗಮಕ್ಕೆ ಪಾವತಿಸಿರುವ ಭದ್ರತಾ ಠೇವಣಿಯನ್ನು ಪೂರ್ಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ತಮಗೆ ಪಾವತಿಸಬೇಕಾದ ಬಾಕಿ ಬಿಲ್‌ನಲ್ಲಿ ಮುಂದಿನ ಪರವಾನಗಿದಾರರು ಆಯ್ಕೆಯಾಗುವವರೆಗೆ ಅಥವಾ ತಮ್ಮ ಟೆಂಡರ್ ಅವಧಿ ಮುಕ್ತಾಯದ ಅವಧಿಯ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗಿನ ಅವಧಿಯಲ್ಲಿ ನಿಗಮವು ಊಟೋಪಚಾರಕ್ಕೆ ಸ್ಥಳೀಯವಾಗಿ ಭರಿಸುವ ಹೆಚ್ಚುವರಿ ಖರ್ಚುವೆಚ್ಚವನ್ನು ಕಡಿತಗೊಳಿಸಲಾಗುವುದು.

44. ಆಯ್ಕೆಗೊಂಡ ಪರವಾನಗಿದಾರರು ಸ್ವತ: ವ್ಯವಹಾರ ನಡೆಸುವುದು, ಪರಭಾರೆ ಮಾಡುವಂತಿಲ್ಲ.

45. ಬಿಡ್‌ದಾರರ ಷರತ್ತಿನ ಟೆಂಡರ್‌ನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸಿರುವ ಅರ್ಹ ಬಿಡ್‌ದಾರರನ್ನು ಮಾತ್ರ ಅಂಗೀಕರಿಸಲಾಗುವುದು.

46. ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employees Provident Fund Organisation) ರವರಲ್ಲಿ ನೋಂದಣಿ ಮಾಡಿಸಿಕೊಂಡಿರಬೇಕು. ನಿಗಮದಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಕನಿಷ್ಟ ವೇತನ, ಭವಿಷ್ಯ ನಿಧಿ ವಂತಿಕೆಯನ್ನು ಆರ್.ಸಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಜಮಾ ಮಾಡಿರುವ ಸಂಬಂಧ ಪ್ರತಿ ಮಾಹೆ ಬಿಲ್‌ನೊಂದಿಗೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವುದು. ಅಥವಾ 10 ಜನದೊಳಗೆ ಕಾರ್ಮಿಕರನ್ನು ನಿಯೋಜಿಸಿಕೊಂಡಲ್ಲಿ ಸಂಬಂಧಿಸಿದ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

47. ಬಾಲಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ದರಾಗಿರಬೇಕು.

48. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್ / ಸಂಧಾನದಲ್ಲಿ ಭಾಗವಹಿಸಿದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

49. ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.

50. ಬಿಡ್‌ದಾರರ ಮತ್ತು ಎರಡನೇ ಪಾರ್ಟಿಯವರ ನಡುವೆ ವ್ಯಾಜ್ಯ ಉಂಟಾದಲ್ಲಿ ಕ.ರಾ.ರ.ಸಾ.ನಿಗಮದ ಮಾನ್ಯ ನಿರ್ದೇಶಕರು (ಸಿಬ್ಬಂದಿ ಮತ್ತು ಪರಿಸರ) ರವರು ಮಧ್ಯಸ್ಥಿಕೆದಾರರಾಗಿರುತ್ತಾರೆ. ನಿರ್ದೇಶಕರು ನೀಡುವ ಆದೇಶವೇ ಅಂತಿಮವಾಗಿರುತ್ತದೆ.

51. ವಿಭಾಗೀಯ ಕೇಂದ್ರ ಸ್ಥಳದಲ್ಲಿನ ನ್ಯಾಯಾಲಯಗಳ ವ್ಯಾಪ್ತಿಯಲ್ಲಿ ಮಾತ್ರ ದಾವೆ/ತಕರಾರುಗಳನ್ನು ದಾಖಲಿಸಲು ಹಾಗೂ ಇತ್ಯರ್ಥಪಡಿಸಲು ಅವಕಾಶವಿರುತ್ತದೆ.

52. ಎರಡನೇ ಪಾರ್ಟಿಯು ಒಂದನೇ ಪಾರ್ಟಿಯ ಲಿಖಿತ ಒಪ್ಪಿಗೆ ಇಲ್ಲದೇ ಯಾವುದೇ ದಾವೆಯನ್ನು ಸಿವಿಲ್ ನ್ಯಾಯಾಲಯದಲ್ಲಿ ಹೂಡುವಂತಿಲ್ಲ ಮತ್ತು ಪರವಾನಗಿ ಷರತ್ತುಗಳು ಉಲ್ಲಂಘನೆಯಾದಲ್ಲಿ ಪರವಾನಗಿ ಪಡೆದ ವಾಣಿಜ್ಯ ಮಳಿಗೆಗಳನ್ನು ಸಾರ್ವಜನಿಕ ಕಟ್ಟಡಗಳೆಂದು ಪರಿಗಣಿಸಿ ಕರ್ನಾಟಕ ಪಬ್ಲಿಕ್ ಪ್ರಿಮಿಸಿಸ್ (ಎವಿಕ್ಷನ್ ಆಫ್ ಅನ್‌ಆಥರೈಸ್ಡ್ ಆಕ್ಯುಪೆಂಟ್ಸ್) ಆಕ್ಟ್ ಅಡಿಯಲ್ಲಿ ಮೊದಲನೇ ಪಾರ್ಟಿಯು ಕ್ರಮಕೈಗೊಳಬಹುದಾಗಿರುತ್ತದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿರಿ
ಕ.ರಾ.ರ.ಸಾ.ನಿಗಮ,ಮಂಡ್ಯ ವಿಭಾಗ, ಮಂಡ್ಯ

ಗೌರವ ಪೂರ್ವಕವಾಗಿ ಪ್ರತಿಯನ್ನು:–

1. ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.
2. ಪ್ರಾಂಶುಪಾಲು, ಚಾಲಕ ಮತ್ತು ತಾಂತ್ರಿಕ ತರಬೇತಿ ಕೇಂದ್ರ, ಮಳವಳ್ಳಿ. ಕ.ರಾ.ರ.ಸಾ.ನಿ., ಮಂಡ್ಯ ವಿಭಾಗ.

ಪ್ರತಿಯನ್ನು:–

1. ಘಟಕ ವ್ಯವಸ್ಥಾಪಕರು ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ,ಆರ್.ಪೇಟೆ ಹಾಗೂ ಪಾಂಡವಪುರ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ, ಹಾಗೂ ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಸಂಧಾನ/ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.
2. ವಿಭಾಗೀಯ ಸಂಚಲನಾಧಿಕಾರಿ/ಸಹಾಯಕ ಕಾನೂನು ಅಧಿಕಾರಿ/ಸಹಾಯಕ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ವಿಭಾಗರವರುಗಳು ಸಂಧಾನ/ಟೆಂಡರ್ ತೆರೆಯುವ ಸಮಯದಲ್ಲಿ ಹಾಜರಿರಲು ಸೂಚಿಸಲಾಗಿದೆ ಹಾಗೂ ಸ.ಕಾ.ನಿ.ಅ.ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಸಂಧಾನ/ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.
3. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿ, ವಾ.ಕ.ರ.ಸಾ.ನಿ, ಈ.ಕ.ರ.ಸಾ.ನಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.